## 6. ಅಧಿಕೃತ ನಿರ್ಣಯ :

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) :** ಮಾನ್ಯ ಅಧ್ಯಕ್ಷರೆ, "ಸಂವಿಧಾನದ 371 (ಡಿ) ಅನುಚ್ಛೇದದ ಅಡಿಯಲ್ಲಿ ಆಂಧ್ರ ಪ್ರದೇಶದ ಕೆಲವು ಭಾಗಗಳಿಗೆ ವಿಶೇಷ ಸ್ಥಾನಮಾನ ನೀಡಿರುವಂತೆಯೇ ಕರ್ನಾಟಕ ರಾಜ್ಯ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಗಳನ್ನು ನೀಡುವುದಕ್ಕಾಗಿ ಭಾರತ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವಂತೆ ಕೇಂದ್ರ ಸರ್ಕಾರವನ್ನು ಈ ಸದನವು ಒಮ್ಮತದಿಂದ ಒತ್ತಾಯಪಡಿಸುತ್ತದೆ."

**ಶ್ರೀ ಅಪ್ಪಾಜಿ ಎಸ್. ನಾಡಗೌಡ :** ಬರಿ ಹೈದರಾಬಾದ್ ಕರ್ನಾಟಕ ವಾಗುತ್ತಿದೆ. In fact, ಹಳೇ ಬಾಂಬೆ ಕರ್ನಾಟಕದಲ್ಲೂ ಕೂಡ ಬಿಜಾಪುರದ ಕೆಲವು ಭಾಗ ಬಹಳ ಹಿಂದುಳಿದಿವೆ ಅಂಥವನ್ನು ಸೇರಿಸಬೇಕೆನ್ನುವ ಒತ್ತಾಯ ಮೊದಲಿನಿಂದಲೂ ಇದೆ. ಇವತ್ತಿನವರೆವಿಗೂ ಆ ಬಗ್ಗೆ ಯಾರೂ ಮಾತನಾ ಡುತ್ತಿಲ್ಲ, ದಯವಿಟ್ಟು ಇದನ್ನೂ ಕೂಡ ಅದರಲ್ಲಿ ಸೇರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಡಾ: ಎಂ.ಸಿ. ಸುಧಾಕರ್ :** ಬರೀ ಉತ್ತರ ಕರ್ನಾಟಕ ಏಕೆ? ನಮ್ಮ ಕಡೆಯದನ್ನು ಸ್ವಲ್ಪ ನೋಡಿ, ನಮಗೆ ಶಾಶ್ವತ ನದಿ ಮೂಲ ಏನೂ ಇಲ್ಲ, ಹಾಗಾದರೂ ಸ್ವಲ್ಪ ಅನುಕೂಲವಾಗಲಿ.

**ಅಧ್ಯಕ್ಷರು :** ಪ್ರಸ್ತಾವ ಏನೆಂದರೆ:

"ಸಂವಿಧಾನದ 371(ಡಿ) ಅನುಚ್ಛೇದದ ಅಡಿಯಲ್ಲಿ ಆಂಧ್ರಪ್ರದೇಶದ ಕೆಲವು ಭಾಗಗಳಿಗೆ ವಿಶೇಷ ಸ್ಥಾನಮಾನ ನೀಡಿರುವಂತೆಯೇ ಕರ್ನಾಟಕ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡುವುದಕ್ಕಾಗಿ ಭಾರತ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವಂತೆ ಕೇಂದ್ರ ಸರ್ಕಾರವನ್ನು ಈ ಸದನವು ಒಮ್ಮತದಿಂದ ಒತ್ತಾಯ ಪಡಿಸುತ್ತದೆ."

**ಪ್ರಸ್ತಾವಕ್ಕೆ ಅನುಮೋದನೆ ದೊರೆಯಿತು ಮತ್ತು ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.**

## 7. ವಿತ್ತೀಯ ಕಾರ್ಯಕಲಾಪಗಳು :

**2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.**